ಕರ್ನಾಟಕದಲ್ಲಿಯೂ ಎರಡನೇ ಹಂತದ ಅಲೆ ಸಾಧ್ಯತೆ । ಜನರಲ್ಲಿ ಮತ್ತೆ ಆತಂಕ

ಆರ್‌ಟಿಪಿಸಿಆರ್ ಕೋವಿಡ್ ಪರೀಕ್ಷೆ ಮಾಡಿಸಿ

• ದಿಗಂತ ವರದಿ, ಮಂಡ್ಯ

ಕೇರಳ ಹಾಗೂ ಮಹಾರಾಷ್ಟ್ರದಲ್ಲಿ ಎರಡನೇ ಹಂತದ ಕೋವಿಡ್-19 ಪ್ರಕರಣಗಳು ಹೆಚ್ಚಾಗುತ್ತಿದ್ದು, ಕರ್ನಾಟಕದಲ್ಲಿಯೂ ಎರಡನೇ ಹಂತದ ಅಲೆ ಪ್ರಾರಂಭವಾಗಬಹುದೆಂಬ ನಿಟ್ಟಿನಲ್ಲಿ, ನಮ್ಮ ಜಿಲ್ಲೆಯಲ್ಲಿನ ವಸತಿ ನಿಲಯಗಳಿಗೆ ಹೊರ ರಾಜ್ಯಗಳಿಂದ ಬರುವ ವಿದ್ಯಾರ್ಥಿಗಳು ಮತ್ತು ರಾಜ್ಯಕ್ಕೆ ಭೇಟಿ ನೀಡುವ ಪ್ರವಾಸಿಗರು ಕಡ್ಡಾಯವಾಗಿ ಆರ್.ಟಿ-ಪಿ.ಸಿ.ಆರ್ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ. ಮಂಚೇಗೌಡ ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಕೋವಿಡ್-19 ಲಸಿಕೆ ಕಾರ್ಯಕ್ರಮದ ಪ್ರಗತಿ ಪರಿಶೀಲನಾ ವಿಡಿಯೋ ಸಂವಾದದ ನಂತರ ಮಾತನಾಡಿದ ಅವರು, ಕೇರಳ ಹಾಗೂ ಮಹಾರಾಷ್ಟ್ರದಿಂದ ರಾಜ್ಯಕ್ಕೆ ಭೇಟಿ ನೀಡುವವರು 72 ಗಂಟೆಯ ಮೊದಲೇ ಆರ್.ಟಿ-ಪಿ.ಸಿ.ಆರ್ ಕೋವಿಡ್ ಪರೀಕ್ಷೆ ಇದ್ದರೆ ಮಾತ್ರ ಒಳಗಡೆ ಬಿಡಬೇಕು ಎಂಬ ಆರೋಗ್ಯ ಸಚಿವ ಡಾ. ಸುಧಾಕರ್ ರವರ ಆದೇಶವನ್ನು ತಿಳಿಸಿದರು.

ಎಲ್ಲರೂ ದೈಹಿಕ ಅಂತರ ಕಾಪಾಡಿಕೊಳ್ಳಬೇಕು, ಆಗಾಗ ಸ್ಯಾನಿಟೈಸರ್ ಬಳಸಬೇಕು, ಹೆಚ್ಚಾಗಿ ಹೋಟೆಲ್ ಇತರ ಸಮಾರಂಭಗಳಲ್ಲಿ ಎಚ್ಚರಿಕೆಯಿಂದ ಇದ್ದರೆ ಎರಡನೇ ಹಂತದ ಕೋವಿಡ್-19 ಅಲೆ ತಡೆಗಟ್ಟಬಹುದು ಎಂಬ ಆರೋಗ್ಯ ಸಚಿವರ ಸಲಹೆಯಂತೆ ಈ ವಿಚಾರವನ್ನು ಎಲ್ಲರ ಗಮನಕ್ಕೆ ತರಲು ಜಿಲ್ಲೆಯಲ್ಲಿ ವ್ಯವಸ್ಥೆ ಮಾಡಲಾಗುತ್ತಿದೆ ಎಂದರು.

ಪಾಂಡವಪುರ ಉಪವಿಭಾಗಾಧಿಕಾರಿ ಶಿವನಂದಮೂರ್ತಿ ಮಾತನಾಡಿ, ಮೊದಲನೇ ಹಂತದ ಲಸಿಕೆ ಪಡೆದ ಕೋವಿಡ್-19 ಫಲಾನುಭವಿಗಳ ಜಿಲ್ಲಾವಾರು ಪ್ರಗತಿಯಲ್ಲಿ, ಮಂಡ್ಯ ಜಿಲ್ಲೆಯು 74% ಪ್ರಗತಿ ಸಾಧಿಸಿ ರಾಜ್ಯದಲ್ಲಿ 4ನೇ ಸ್ಥಾನದಲ್ಲಿತ್ತು ಮತ್ತು ಎರಡನೇ ಹಂತದ ಕೋವಿಡ್-19 ಲಸಿಕೆ ಪಡೆದ ಫಲಾನುಭವಿಗಳ ಪ್ರಗತಿಯಲ್ಲಿ ಮಂಡ್ಯ ಜಿಲ್ಲೆಯು ಶೇ. 100ರಷ್ಟು ಪ್ರಗತಿ ಸಾಧಿಸಿ ರಾಜ್ಯದಲ್ಲೇ ಮೊದಲ ಸ್ಥಾನದಲ್ಲಿದೆ ಎಂದು ವಿವರಿಸಿದರು.

ವಿಡಿಯೋ ಸಂವಾದದಲ್ಲಿ ಪೊಲೀಸ್ ವರಿಷ್ಠಾಧಿಕಾರಿ ಕೆ.ಪರಶುರಾಮ್, ಜಿಲ್ಲಾ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯಾಧಿಕಾರಿ ಡಾ.ಸೋಮಶೇಖರ್, ಜಿಲ್ಲಾ ಸರ್ವೇಕ್ಷಣಾ ಅಧಿಕಾರಿ ಡಾ.ಸಂಜಯ್ ಮತ್ತು ಜಿಲ್ಲಾಮಟ್ಟದ ಅಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

ಕೇರಳ ಹಾಗೂ ಮಹಾರಾಷ್ಟ್ರದಲ್ಲಿ ಎರಡನೇ ಹಂತದ ಕೋವಿಡ್-19 ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಕೋವಿಡ್-19 ಲಸಿಕೆ ಕಾರ್ಯಕ್ರಮದ ಪ್ರಗತಿ ಪರಿಶೀಲನಾ ವಿಡಿಯೋ ಸಂವಾದದ ನಂತರ ಜಿಲ್ಲಾ ಆರೋಗ್ಯಾಧಿಕಾರಿ ಡಾ. ಮಂಚೇಗೌಡ ಮಾತನಾಡಿದರು.

ಕಿರು ಸುದ್ದಿ

ತಾಯಿ,ಮಗಳು ನಾಪತ್ತೆ

ಪಾಂಡವಪುರ: ಚಿಕ್ಕಾಡೆ ಗ್ರಾಮದಿಂದ ಪುತ್ರಿಯೊಂದಿಗೆ ತಾಯಿ ನಾಪತ್ತೆಯಾಗಿರುವ ಘಟನೆ ನಡೆದಿದೆ.

ಗ್ರಾಮದ ನಿವಾಸಿ ಸತೀಶ್ ಅವರ ಪತ್ನಿ ರೋಜಾ(26) ಹಾಗೂ ಆಕೆಯ ಪುತ್ರಿ ಜಾನವಿ (8) ನಾಪತ್ತೆಯಾಗಿದ್ದು, ಕಳೆದ 10 ವರ್ಷಗಳ ಹಿಂದೆ ಗ್ರಾಮದ ಕರಿಯಪ್ಪ ಎಂಬುವವರ ಮಗ ಸತೀಶ್ ಎಂಬುವವರಿಗೆ ಮಗಳನ್ನು ಮದುವೆ ಮಾಡಿಕೊಡಲಾಗಿತ್ತು.

ಇಬ್ಬರು ಮಕ್ಕಳೊಂದಿಗೆ ದಂಪತಿಗಳು ಅನ್ಯೋನ್ಯವಾಗಿದ್ದರು.

ಆದರೆ ಅಳಿಯ ಸತೀಶ್ ಮದ್ಯಪಾನ ಮಾಡಿ ಜಗಳವಾಡಿಕೊಂಡಿದ್ದರು. ಜ.1 ರಂದು ಸುಮಾರು 5.30ರ ಸಮಯದಲ್ಲಿ ನನ್ನ ಅಳಿಯ ಸತೀಶ್ ದೂರವಾಣಿ ಮೂಲಕ ನಿಮ್ಮ ಮಗಳು ಮತ್ತು ಮೊಮ್ಮಗಳು ಕಾಣಿಸುತ್ತಿಲ್ಲ ಎಂದು ತಿಳಿಸಿದರು. ನಂತರ ನನ್ನ ಮಗಳ ಪರಿಚಯಸ್ಥರು, ಸ್ನೇಹಿತರು ಮತ್ತು ಸಂಬಂಧಿಕರ ಮನೆಯಲ್ಲೆಲ್ಲ ಹುಡುಕಾಟ ನಡೆಸಿದರೂ ಎಲ್ಲೂ ಪತ್ತೆಯಾಗಿರುವುದಿಲ್ಲ ಎಂದು ನಾಪತ್ತೆಯಾದ ಗೃಹಿಣಿಯ ಪಾಲಕರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಕಾಣೆಯಾದವರ ಚಹರೆ : ಗೃಹಿಣಿ ಎಣ್ಣೆಗೆಂಪು ಬಣ್ಣ, 5.6 ಅಡಿ ಎತ್ತರ, ದೃಢಕಾಯ ಶರೀರ, ದುಂಡು ಮುಖ, ಎಡಗೈ ಮೇಲೆ ಎಸ್‌ಆರ್ ಎಂದು ಹಚ್ಚೆ ಇದೆ.

ಕಾಣೆಯಾದ ದಿನ ಹಳದಿ ಬಣ್ಣದ ಪ್ಯಾಂಟ್ ಹಾಗೂ ಟಾಪ್ ಧರಿಸಿದ್ದರು. ಕಾಣೆಯಾದ ಬಾಲಕಿ ಕೆಂಪು ಬಣ್ಣ, ದುಂಡು ಮುಖ, ಮೈಮೇಲೆ ಹಳದಿ ಬಣ್ಣದ ಟಾಪ್ ಬಿಳಿ ಬಣ್ಣದ ಪ್ಯಾಂಟ್ ಧರಿಸಿದ್ದಳು. ಪಾಂಡವಪುರ ಪೊಲೀಸರು ದೂರು ದಾಖಲಿಸಿಕೊಂಡಿದ್ದು, ಇಬ್ಬರ ಬಗ್ಗೆ ಮಾಹಿತಿ ತಿಳಿದರೆ ತಕ್ಷಣ ಪೊಲೀಸ್ ಠಾಣೆ ಸಂಪರ್ಕಿಸುವಂತೆ ಸಬ್‌ಇನ್ಸ್‌ಪೆಕ್ಟರ್ ಪೂಜಾ ಕುಂಟೋಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿಗಳಿಂದ ತ್ಯಾಜ್ಯ ಸಂಗ್ರಹ

ಶ್ರೀರಂಗಪಟ್ಟಣ: ಆಸುಪಾಸಿನ ಗ್ರಾಮಗಳಿಗೆ ಅಮ್ಮಜೀವಜಲದ ಮೂಲವಾಗಿರುವ ಕರಿಘಟ್ಟ ಅರಣ್ಯದ ಸಂರಕ್ಷಣೆಗೆ ಅರಣ್ಯ ಇಲಾಖೆ ಮತ್ತು ಸಂಘ, ಸಂಸ್ಥೆಗಳ ಕಟಿಬದ್ಧವಾಗಿ ಕೆಲಸ ಮಾಡಬೇಕು ಎಂದು ಪರಿಸರವಾದಿಗಳಾದ ಅರೇನಹಳ್ಳಿ ಧರ್ಮೇಂದ್ರಕುಮಾರ್ ಮತ್ತು ಬಾಲಸುಬ್ರಹ್ಮಣ್ಯ ಹೇಳಿದರು.

ಕರಿಘಟ್ಟದಲ್ಲಿ ಭಾನುವಾರ ನಡೆದ ಪರಿಸರ ಸಂರಕ್ಷಣಾ ಕಾರ್ಯಕ್ರಮದಲ್ಲಿ ಮಾತನಾಡಿ, ಧರ್ಮೇಂದ್ರಕುಮಾರ್, 'ಕರಿಘಟ್ಟ ಜೀವ ವೈವಿಧ್ಯತೆಯ ತಾಣ. ಬಗೆ ಬಗೆಯ ಸಸ್ಯ ಮತ್ತು ಜೀವ ಸಂಕುಲಕ್ಕೆ ಆಶ್ರಯ ನೀಡಿದೆ. ಆದರೆ ಇಂತಹ ತಾಣಕ್ಕೆ ಬೇಸಿಗೆಯಲ್ಲಿ ಬೆಂಕಿ ಹಚ್ಚಿ ಸುಡುವ ಕೆಲಸ ನಡೆಯುತ್ತಿದೆ. ಇದನ್ನು ತಡೆಯಲು ಸಾಂಘಿಕ ಪ್ರಯತ್ನ ನಡೆಯಬೇಕು' ಎಂದರು.

'ಟಿಪ್ಪು ಸುಲ್ತಾನ್ ಕಾಲದಲ್ಲಿ ಕರಿಘಟ್ಟ ಕಾವಲು ಗೋಪುರವಾಗಿತ್ತು ಎಂಬುದಕ್ಕೆ ಪುರಾವೆಗಳಿವೆ. ದಟ್ಟ ಅರಣ್ಯದಿಂದ ಕೂಡಿದ್ದ ಈ ತಾಣ ಮುಂದಿನ ಪೀಳಿಗೆಗೂ ಉಳಿಯುವಂತಾಗಬೇಕು ಎಂದರು.

ನಂಜನಗೂಡು ತಾಲೂಕು ಕಚೇರಿ ಉಪ ತಹಸೀಲ್ದಾರ್ ಬಾಲಸುಬ್ರಹ್ಮಣ್ಯ ಮಾತನಾಡಿ, 'ಹಲವು ಶತಮಾನಗಳ ಹಿಂದೆ ಕರಿಘಟ್ಟ ಅರಣ್ಯ ಆನೆಗಳು ಆವಾಸ ಸ್ಥಾನವಾಗಿತ್ತು ಎಂದು ಸಂಶೋಧಕರು ಹೇಳುತ್ತಾರೆ. ಪ್ರಾಣಿ ಮತ್ತು ಪಕ್ಷಿ ಸಂಕುಲಕ್ಕೆ ಆಧಾರವಾಗಿರುವ ಈ ತಾಣಕ್ಕೆ ಮೂಢಮತಿಗಳು ಬೆಂಕಿ ಹಚ್ಚಿ ಪರಿಸರವನ್ನು ನಾಶ ಮಾಡುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆಯಲ್ಲ' ಎಂದು ವಿಷಾದಿಸಿದರು.

ಮೈಸೂರು ಸಿದ್ಧಾರ್ಥ ನಗರ ಪ್ರಥಮ ದರ್ಜೆ ಕಾಲೇಜಿನ ಪ್ರೊ.ಪ್ರಸನ್ನಕುಮಾರ್ ಮಾತನಾಡಿದರು.

ಚುಂಚ ಶ್ರೀಗಳಿಂದ ನವ ವಧೂ-ವರರಿಗೆ ಅಕ್ಷತೆ

ಚನ್ನರಾಯಪಟ್ಟಣ: ಬದುಕು ಬೇಸರದ ಬಂಧನವಾಗ ಬಾರದು ಬದಲಿಗೆ ಬಾಂಧವ್ಯದ ಬೆಸುಗೆಯಾಗಿರಬೇಕು ಎಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಡಾ.ನಿರ್ಮಲಾನಂದನಾಥ ಮಹಾ ಸ್ವಾಮೀಜಿ ಹೇಳಿದರು.

ಪುರಾಣ ಪ್ರಸಿದ್ಧ ಶ್ರೀಕ್ಷೇತ್ರ ಕಬ್ಬಳಿ ಬಸವೇಶ್ವರಸ್ವಾಮಿ ಸನ್ನಿಧಿಯಲ್ಲಿ ಸೋಮವಾರ ಏರ್ಪಡಿಸಿದ್ದ ಪ್ರಥಮ ವರ್ಷದ ಉಚಿತ ಸಾಮೂಹಿಕ ವಿವಾಹ ಮಹೋತ್ಸವ ದಲ್ಲಿ ಹೊಸ ಜೀವನಕ್ಕೆ ಕಾಲಿಟ್ಟ ನವ ದಂಪತಿಗಳಿಗೆ ಆರಿಸಿ ಆಶೀರ್ವಚನ ನೀಡಿದರು.

ಅಕ್ಕಿಯೊಂದಿಗೆ ಅರಿಶಿನ ಸೇರಿಸಿದರೆ ಅಕ್ಷತೆಯಾಗಲಿದೆಯೋ ಅದೇ ರೀತಿ ಗಂಡನೊಂದಿಗೆ ಹೆಣ್ಣು ಕೈ ಜೋಡಿಸಿ ಒಬ್ಬರನ್ನೊಬ್ಬರು ಅರಿತು ಹೆಜ್ಜೆ ಇರಿಸಿದರೆ ಬದುಕು ಅಕ್ಷಯ ಪಾತ್ರೆಯಂತಾಗಲಿದೆ. ಗಂಡ-ಹೆಂಡತಿ ನಡುವೆ ಸಣ್ಣ ಪ್ರಮಾಣ ದಲ್ಲಿ ಕಿತ್ತಾಟವಿದ್ದರೆ ಜೀವನದಲ್ಲಿ ಸಾಮರಸ್ಯ ಏರ್ಪಡುತ್ತದೆ ಆದರೆ ಜಗಳದಿಂದ ದ್ವೇಷ ಮುಂದುವರಿಯಬಾರದು ಎಂದರು. ಆಳದು ಉಳಿದು ದೊಡ್ಡದಾಗಿ ಹರಡಿ ಕೊಂಡು ಬೆಳೆದಿರುವ ಯಾವುದೇ ಒಂದು ಮರವು ಹೆಚ್ಚು ದಿನಗಳ ಕಾಲ ಉಳಿಯುತ್ತದೆ ಆದರೆ ಯಾವುದೇ ಆಧ್ಯಿಯಿಲ್ಲದೇ ಗಗನ ಮುಟ್ಟುವ ಮರಕ್ಕೆ ಶೀಘ್ರವೇ ಕೊಡಲಿ ಪೆಟ್ಟು ಬೀಳಲಿದೆ. ಅದರಂತೆ ತೆರೆಯೇ ದಾನ-ಧರ್ಮ ಕಾರ್ಯಗಳೊಂದಿಗೆ ತಗ್ಗಿ-ಬಗ್ಗಿ ಕಟ್ಟುವ ಸಂಸಾರ ಅಥವಾ ಕುಟುಂಬ ಪರಂಪರೆಯಾಗಿ ಉಳಿದು ಬೆಳೆಯಲಿದೆ ಎಂದರು. 'ಬೆಂಗಳೂರಿನಿಂದ 10 ಜೋಡಿ, ಹಾಸನ- 3, ಶಿವಮೊಗ್ಗ-1, ಹಾವೇರಿ-3 ಹಾಗೂ ಚಿತ್ರದುರ್ಗ-2, ತುಮಕೂರಿನಿಂದ 3 ಸೇರಿ ಒಂಟೆ 22 ಜೋಡಿ ವಧು-ವರರು ಆಗಮಿಸಿದ್ದು ಚುಂಚಶ್ರೀಗಳ ಸಾನಿಧ್ಯ ಹಾಗೂ ಪಾಲಕರ ಸಮ್ಮುಖದಲ್ಲಿ ಮಾಂಗಲ್ಯ ಧಾರಣೆ, ಧಾರೆ-ಮಹೋರ್ತ ಜರುಗಿದ್ದು ನವ ದಂಪತಿಗಳು ಚುಂಚ ಶ್ರೀಗಳಿಂದ ಆಶೀರ್ವಾದ ಪಡೆದರು. ರಾಮನಗರ ಶಾಖಾ ಮಠದ ಅನ್ನದಾನೇಶ್ವರನಾಥಸ್ವಾಮೀಜಿ, ದಸರೀಘಟ್ಟದ ಶ್ರೀ ಚಂದ್ರಶೇಖರನಾಥಸ್ವಾಮೀಜಿ, ಹುಳಿಮಾವು ಶ್ರೀ ಶೈಲನಾಥ ಸ್ವಾಮೀಜಿ, ಕಬ್ಬಳಿ ಮಠದ ಶ್ರೀ ಶಿವಪುತ್ರನಾಥಸ್ವಾಮೀಜಿ, ಶಾಸಕ ಸಿ.ಎನ್.ಬಾಲಕೃಷ್ಣ, ಎಂಎಲ್‌ಸಿ ಎಂ.ಎ. ಗೋಪಾಲಸ್ವಾಮಿ, ಕಬ್ಬಳಿಗ್ರಾ.ಪಂ ಅಧ್ಯಕ್ಷ ಶಿವನಂಜೇಗೌಡ ಇದ್ದರು.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ
ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.033/ಪಿಜಿ/ಗುತ್ತಿಗೆ/5054-ಎಸ್‌ಸಿಪಿ-3054-5054 ಎಸ್‌ಸಿಪಿ-ಟಿಎಸ್‌ಪಿ/2020-21/7710/ ದಿನಾಂಕ : 20-02-2021

ಇ-ಟೆಂಡರ್ ಪ್ರಕಟಣೆ

ದಿನಾಂಕ : 20-02-2021ರಂದು ಇ-ಪ್ರೊಕ್ಯೂರ್‌ಮೆಂಟ್ ಮೂಲಕ, ಕಾಮಗಾರಿಗಳ ಇಂಡೆಂಟ್ ಸಂಖ್ಯೆ 135174, 135175 & 135176 ರ ಕಾಮಗಾರಿಗಳಿಗೆ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ : 08-03-2021 (ಸಾಯಂಕಾಲ 4.00 ಗಂಟೆಯವರೆಗೆ ಮಾತ್ರ) ಹಾಗೂ ಕಾಮಗಾರಿಗಳ ಇಂಡೆಂಟ್ ಸಂಖ್ಯೆ 135634, 135852 & 132435-3ನೇ ಕರೆ ಕಾಮಗಾರಿಗಳಿಗೆ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ : 01-03-2021 (ಸಾಯಂಕಾಲ 4.00 ಗಂಟೆಯವರೆಗೆ ಮಾತ್ರ) ವನ್ನು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ http://www.eproc.karnataka.gov.in ನ್ನು ಸಂಪರ್ಕಿಸಲು ಕೋರಲಾಗಿದೆ.
ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ.

ಶೆಡ್ಯೂಲ್-2 ಫಾರ್ಮ್ ಬಿ
ಸಾರ್ವಜನಿಕ ಪ್ರಕಟಣೆ
ಬಿಪಿ ಟೆಕ್ ಸೊಲ್ಯೂಶನ್ಸ್ ಪ್ರೈವೇಟ್ ಲಿಮಿಟೆಡ್‌ನ ಹಕ್ಕುದಾರರ ಗಮನಕ್ಕೆ

ಕಾರ್ಯಪಾಲಕ ಇಂಜನೀಯರ್‌ರವರ ಕಛೇರಿ, ಕೆಶಿಪ್ ವಿಭಾಗ, ಶಿವಮೊಗ್ಗ
ಇ-ಮೇಲ್: eekshipshmg@gmail.com
ದೂರವಾಣಿ: 08182-295654
ಕ್ರ.ಸಂ.EE/KSHIP/DN/SMG/AE-2/PK-III/tree/2020-21/ 1601
ದಿನಾಂಕ:22.02.2021
ಅಲ್ಪಾವಧಿ-ಟೆಂಡರ್-ಕಂ-ಹರಾಜು
(ಇ-ಪ್ರೊಕ್ಯೂರ್‌ಮೆಂಟ್ ಮೋಡ್ ಮಾತ್ರ)

ಕರ್ನಾಟಕ ಸರ್ಕಾರ ಉಪ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಚಾಮರಾಜನಗರ.
ಕೊಠಡಿ ಸಂಖ್ಯೆ: 121, 1ನೇ ಮಹಡಿ, ಜಿಲ್ಲಾಡಳಿತ ಭವನ, ಚಾಮರಾಜನಗರ ಜಿಲ್ಲೆ-571313. ಕಛೇರಿ ದೂರವಾಣಿ ಸಂಖ್ಯೆ: 0822-222855.
ಇ-ಮೇಲ್ : dswochanagards@gmail.com
ಸಂ: ಉಪನಿಕಕಾ/ಮೂ.ಟೆಂಡರ್/ಸಿ.ಆರ್-01/2020-21. ದಿನಾಂಕ:20.02.2021
ಉಪನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಚಾಮರಾಜನಗರ ಜಿಲ್ಲೆ.

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ (ರಿ.)
ಟೆಂಡರ್ ಪ್ರಕಟಣೆ
Date: 22.02.2021
DIPR/DDD/Zon/BO-2882/2020-21

ಪಟ್ಟೇರಿಪುರ ಬೃಹತ್ ಉದ್ಯಾನವನ
ಟೆಂಡರ್ ಪ್ರಕಟಣೆ
https://eproc.karnataka.gov.in
ದಿನಾಂಕ : 19.03.2021
ದಿನಾಂಕ : 22.03.2021 ರಂದು ಬೆಳಗ್ಗೆ 11.30ಕ್ಕೆ

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ.
ದಿನಾಂಕ: 17.02.2021
ಅಲ್ಪಾವಧಿ ಟೆಂಡರ್ ಪ್ರಕಟಣೆ
DIPR/CTA/MCA/778/2020-21

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ದೂರವಾಣಿ: 0821-2420850
E-mail ID: seechnkodagu@cescmysore.org

CHAMUNDESHWARI ELECTRICITY SUPPLY CORPORATION LIMITED
(A Government of Karnataka Undertaking)
O&M Circle, Chamarajanagar-Kodagu,
MPL Compound, Sri Harsha Road,
Mysuru- 570001
Web site: www.cescmysore.org
E-mail ID: seechnkodagucescmysore.org

ಅಲ್ಪಾವಧಿ ಟೆಂಡರ್ ಪ್ರಕಟಣೆ

Enquiry No.	Description of work	Amount Put to tender in Lakhs	EMD
CESC/SEE/O&M/EEE/AEE/20-21/Vehicle /MDK:01 Date: 16.02.2021.	[illegible]	59.50	1,18,800

ಬಿಡ್ ದಸ್ತಾವೇಜುಗಳನ್ನು 20.02.2021 ರಂದು ಅಥವಾ ನಂತರ "ಇ-ಪ್ರೊಕ್ಯೂರ್‌ಮೆಂಟ್" ವೆಬ್ ಸೈಟ್‌ನಲ್ಲಿ ಪಡೆಯಬಹುದಾಗಿದೆ. http://eproc.karnataka.gov.in ಅಥವಾ ಸಹಾಯ ವಾಣಿ: 080-25501227/25501216 ಅಥವಾ ಈ ಮೇಲ್ hphelpdesk.blr@intarvo.com ಮೂಲಕ ಪಡೆಯಬಹುದಾಗಿದೆ.
ಸಹಿ/- ಅಧೀಕ್ಷಕ ಇಂಜನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾ.ನಗರ-ಕೊಡಗು.
DIPR/DDMYS/MCA/1045/2020-21

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ
ದಿನಾಂಕ:19.02.2021
ಅಲ್ಪಾವಧಿ ಟೆಂಡರ್ ಪ್ರಕಟಣೆ-2
ದಿನಾಂಕ : 01-03-2021
ಸಹಿ/- ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಚಿತ್ರದುರ್ಗ.